


ನಾಗೇಶ ಹೆಗಡೆ

# ಜೀವದ ನಕಲು ಸಿಗುವುದಿಲ್ಲ

ಹುಡುಕಿ ಸಾಕಾಗಿದೆ
ಕಂತೆ ಕಡತಗಳಲ್ಲಿ
ನಿನ್ನುಸಿರ ಪ್ರತಿಯನ್ನು...
ಪ್ರತಿ ಉಸಿರನ್ನು...

ಈಗಷ್ಟೇ ಬೆಚ್ಚನೆ ಮಾಳಿಗೆ
ಪಿತ್ತಲ ತಣಸನೆಲ್ಲ ತಡಕಿ
ನಿಶ್ಚಿಂತ ಮಲುಗಿದ್ದೇನೆ,
ಬರೇ ನಿನ್ನ ಮೌನವ
ಬರೆದುಕೊಂಡು ದಿನಚರಿ ತುಂಬ!

ನಾ ನಿದಿರೆ ಹೋದಮೇಲೆ
ನೆರಳಿನಚ್ಚು ಬರೆದು
ನಿನ್ನಾತ್ಮದ ಬಣ್ಣ ಸೋಕು ಇಲ್ಲಿ...
ನಾಳೆ ಅರಳುವ ಯಾವುದಾದರೊಂದು

ಹೂವಲ್ಲಿ ನಿನ್ನ ಚಹರೆಯ
ಅಡಗಿಸಿಡು ಸಾಕು...

ತಲಾ ಒಂದೊಂದರಂತೆ
ಮಳೆಹನಿಗೆಲ್ಲ ಕತ್ತಲ
ಕತ್ತರಿಸಿ ಹಂಚಿದರೂ
ಮುಗಿಯುವುದಿಲ್ಲ...

ದಾರಿಹೋಕ ನಿನ್ನೆಗಳ
ನೆನಪು ಬತ್ತುವವರೆಗೂ
ನಾಳೆ ಹುಟ್ಟುವುದಿಲ್ಲ..

ಎಲ್ಲೂ ನಿನ್ನ ಜೀವದ
ನಕಲು ಸಿಗುವುದಿಲ್ಲ!

• ಚೈತ್ರಿಕಾ ಶ್ರೀಧರ್ ಹೆಗಡೆ